ಸಿಸಿನಂ.23/2023

ಡಿಡಬ್ಲ್ಯೂ: 1

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 23/2023

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀ ಗೋಪಾಲಕೃಷ್ಣ |
| ತಂದೆಯ ಹೆಸರು | : | ವಾಸುದೇವ ಬೋಮಕರ |
| ವರ್ಷ | : | 52 ವರ್ಷ |
| ಉದ್ಯೋಗ | : | ಸುಪರಿನಟೆಂಡೆಂಟ್ ಸೆಂಟ್ರಲ್ ಜಿ ಎಸ್ ಟಿ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 12-09-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎಸ್ ಯು ಎ ವಕೀಲರಿಂದ :**

ನಾನು ಅಗಷ್ಟ 2025 ರಿಂದ ಕುಮಟಾ ಸೆಂಟ್ರಲ್ ಜಿಎಸ್ ಟಿ ಕಚೇರಿಯಲ್ಲಿ ಸುಪರಿನಟೆಂಡೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ನನಗೆ ಯಾವುದೇ ಅರ್ಜಿ ಬಂದಿರುವುದಿಲ್ಲ . ನ್ಯಾಯಲಾಯದಿಂದ ಸಮನ್ಸ ಮಾತ್ರ ಬಂದಿರುತ್ತದೆ. ಸಾಕ್ಷಿ ಇಲೆಕ್ಟ್ರಾನಿಕ್ ಲೆಡ್ಜರ ಎಕ್ಸ್ಟ್ರಾಕ್ಟ ಹಾಜರು ಪಡಿಸಿದ್ದು ನಿಡಿ-1 ಎಂದು ಗುರುತಿಸಲಾಯಿತು . ಈ ಲೆಡ್ಜರ ಎಕ್ಸ್ಟ್ರಾಕ್ಟ ಅಡಿಕೆ ಮಾರಾಟಕ್ಕೆ ಸಂಬಂಧಪಟ್ಟ ದಾಖಲಾತಿ . ಸದರಿ ದಾಖಲಾತಿಯಲ್ಲಿ ತೋರಿಸಿದ ದಿನಾಂಕಗಳನ್ನು ಅಡಿಕೆಯನ್ನು ಮಾರಾಟ ಮಾಡಿದ ದಿನಾಂಕವಾಗಿರುತ್ತವೆ. ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಇನವಾಯ್ಸು ತೆಗೆದು ನೋಡಬೇಕು. ನಿಡಿ-1 ರಲ್ಲಿ ಬರುವುದಿಲ್ಲ. ಬಿಲ್ ಮಾಡಿದ್ದರೆ ಮಾತ್ರ ಇಲೆಕ್ಟ್ರಾನಿಕ್ ಲೆಡ್ಜರ ಎಕ್ಸ್ಟ್ರಾಕ್ಟ ನಲ್ಲಿ ಬರುತ್ತದೆ . ಬಿಲ್ ಮಾಡದಿದ್ದರೆ ಬರುವುದಿಲ್ಲ . ಯಾವ ಯಾವ ದಿನಾಂಕದಂದು ಎಷ್ಟು ಅಡಿಕೆ ಮಾರಾಟವಾಗಿದೆ ಇನವಾಯ್ಸನಲ್ಲಿ ಸಿಗುತ್ತದೆ . ಇನವಾಯ್ಸು

ಸಿಸಿನಂ.23/2023

ಡಿಡಬ್ಲ್ಯೂ: 1

ಮಾರಾಟಗಾರರ ಬಳಿ ಇರುತ್ತದೆ. ಕ್ರೆಡಿಟ್ ಬೇಕಿದ್ದರೆ ಮಾತ್ರ ಅದನ್ನು ನಮ್ಮ ಸಿಸ್ಟಮ್ ನಲ್ಲಿ ಅಪಲೋಡ್ ಮಾಡುತ್ತಾರೆ. ಆ ದಿನಾಂಕದ ಇನವಾಯ್ಸನ್ನು ಸಿಸ್ಟಮ್ ನಿಂದ ತೆಗೆದು ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಇನವಾಯ್ಸನಲ್ಲಿ ಯಾರು ಯಾರಿಗೆ ಅಡಿಕೆ ಮಾರಾಟ ಮಾಡಿದ್ದಾರೆ , ಎಷ್ಟು ತೂಕದ ಅಡಿಕೆ ಮಾರಾಟ ಮಾಡಿದ್ದಾರೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಬಿಲ್ಲಿಂಗ್ ಟ್ರಾಂಜೆಕ್ಷನ್ ಇದ್ದರೆ ಗೊತ್ತಾಗುತ್ತದೆ ಎಂದು ನುಡಿದಿರುತ್ತಾರೆ.

3. ಜಿಎಸ್ ಟಿ ಮ್ಯಾನುವಲ್ ಪ್ರಕಾರ ಕ್ರೆಡಿಟ್ ಕೊಟ್ಟರೂ ಕೂಡ ಕ್ರೆಡಿಟ್ ಬಿಲ್ ಇಸ್ಸು ಮಾಡಬೇಕಾಗುತ್ತದೆ ಎಂದರೆ ಸರಿ . ಅದು ಖರೀದಿಗಾರರು ಹಾಗೂ ಮಾರಾಟಗಾರರಿಗೆ ಸಂಬಂಧ , ನಮಗೆ ಸಂಬಂಧ ಇಲ್ಲ. ನಿಡಿ-1ರಲ್ಲಿ ಖರೀದಿ ಹಾಗೂ ಮಾರಾಟ ಮಾಡಿದ ಬಿಲ್ ಮಾತ್ರ ಬರುತ್ತದೆ . ಮಾರಾಟ ಮಾಡಿದ ಬಿಲ್ ಹಾಗೂ ಖರೀದಿ ಮಾಡಿದ ಬಿಲ್ಲು ತಾಳೆಯಾದರೆ ಕ್ರೆಡಿಟ್ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿ . ಸದರಿ ದಿನಾಂಕದ ಇನವಾಯ್ಸುಗಳನ್ನು ಕೇಳಿದರೆ ಅವುಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ.

(ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.